ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ನ್ಯಾಯಾಲಯ,ಯಾದಗಿರಿ.

**Crl. Misc No.1364 /2024**
**PW : 1**

ದಿನಾಂಕಃ **23-04-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ನಾಗಮ್ಮ |
| ತಂದೆ/ಗಂಡನ ಹೆಸರುಃ | ಶರಣಪ್ಪ |
| ವಯಸ್ಸುಃ | **35** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸ ಸ್ಥಳಃ | ಹೆಡಗಿಮದ್ರಾ |

ಮುಖ್ಯ ವಿಚಾರಣೆ ಅರ್ಜಿದಾರ ಪರವಾಗಿಃ ಶ್ರೀ ಎನ್. ಬಿ. ಎ. ವಕೀಲರಿಂದಃ

1. ಎದುರುದಾರ ನನ್ನ ಗಂಡ. ಅರ್ಜಿದಾರ ನಂಬರ 2 ನನ್ನ ಮಗಳು. ಎದುರುದಾರನ ಜೊತೆ 15-16 ವರ್ಷಕ್ಕಿಂತ ಮುಂಚೆ ಅಬ್ಬೆತುಮಕೂರು ಮಠದಲ್ಲಿ ಹಿರಿಯರ ಸಮ್ಮುಖದಲ್ಲಿ ಆಗಿರುತ್ತದೆ. ಮದುವೆಯಲ್ಲಿ 2 ತೊಲ ಬಂಗಾರ, 30,000/- ರೂ. ಮತ್ತು ಗೃಹಪಯೋಗ ವಸ್ತುಗಳನ್ನು ನೀಡಿರುತ್ತೇವೆ. ಮದುವೆಯಾದ ನಂತರ 2-3 ವರ್ಷಗಳ ಕಾಲ ಸುಖವಾಗಿ ಸಂಸಾರ ಮಾಡಿರುತ್ತೇವೆ. ಅರ್ಜಿದಾರ ನಂಬರ 2 ರವರು ಮದುವೆಯಾದ 2 ವರ್ಷದ ನಂತರ ಜನಿಸಿರುತ್ತಾರೆ. ಎದುರುದಾರನು 1 ಲಕ್ಷ ರೂ. ಹಣವನ್ನು ತೆಗೆದುಕೊಂಡು ಬಾ ಎಂದು ಕಿರುಕುಳ ನೀಡಿರುತ್ತಾನೆ. ಎದುರುದಾರನು ನನಗೆ ಹೊಡೆ-ಬಡೆ ಮಾಡಿ ಮನೆಯ ಹೊರಗೆ ಹಾಕಿರುತ್ತಾನೆ ಆದ್ದರಿಂದ ನಾನು ಮನೆಗೆ ಬಂದಿರುತ್ತೇನೆ. ನಾನು ತವರು ಮನೆಗೆ ಬಂದು 13-14 ವರ್ಷಗಳಾಗಿರುತ್ತವೆ. ಎದುರುದಾರನು ನನಗೆ ಕರೆಯಲು ಬಂದಿರುವುದಿಲ್ಲ. ನಾನು 2 ಸಲ ಹೋದರೂ ಕೂಡ ಎದುರುದಾರನು ಮನೆಯ ಒಳಗೆ ಸೇರಿಸಿರುವುದಿಲ್ಲ. ಸದರಿ ಎದುರುದಾರನು ಬೇರೆ ಮದುವೆ ಮಾಡಿಕೊಂಡಿರುತ್ತಾನೆ ಆದ್ದರಿಂದ ನನ್ನನ್ನು ಕರೆದುಕೊಂಡಿರುವುದಿಲ್ಲ. ಎದುರುದಾರನು ಹತ್ತಿಕುಣಿ ಗ್ರಾಮದ ತಾಯಮ್ಮ ಇವಳ ಜೊತೆ ಮದುುೆಯಾಗಿರುತ್ತಾನೆ. ಸದರಿ ವಿಷಯ ನನ್ನ ಭಾವ ಭೀಮಣ್ಣ ಇವರ ಕಡೆಯಿಂದ ಗೊತ್ತಾಗಿರುತ್ತದೆ. 2-3 ಸಲ ಪಂಚಾಯಿತಿ ಮಾಡಿದರೂ ಕೂಡ ಎದುರುದಾರನು ಏನೂ

ಕೊಡಲ್ಲ ಎಂದು ಹೇಳಿರುತ್ತಾನೆ. ಸದರಿ ಎದುರುದಾರನು ಮನೆಗೆ ಬೀಗ ಹಾಕಿ ಹೊರಗೆ ಹಾಕಿರುತ್ತಾನೆ. ನಾನು ನನ್ನ ತಂದೆ-ತಾಯಿ ಜೊತೆ ಜೀವನ ನಡೆಸುತ್ತಿದ್ದೇನೆ. ಉಪಜೀವನಕ್ಕಾಗಿಯೇ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ.

2. ನನ್ನ ಗಂಡ ಕೂಲಿ ಕೆಲಸ ಮಾಡುತ್ತಾನೆ. ನನ್ನ ಗಂಡನಿಗೆ 6 ಎಕರೆ 20 ಗುಂಟೆ ಜಮೀನು ಇದೆ. ಜಮಿನಿನಿಂದ ವರ್ಷಕ್ಕೆ 10 ಲಕ್ಷ ಆದಾಯ ಇರುತ್ತದೆ. ನನಗೆ ಮತ್ತು ನನ್ನ ಮಗಳ ಜೀವನಾಂಶಕ್ಕಾಗಿ 30 ರಿಂದ 35 ಸಾವಿರ ರೂ. ಹಣದ ಅವಶ್ಯಕತೆ ಇರುತ್ತದೆ. ಎದುರುದಾರನು ಜೀವನಾಂಶ ನೀಡಲು ಭಾದ್ಯಸ್ಥ ಇರುತ್ತಾನೆ. ಪಹಣಿಗಳನ್ನು ನಿಪಿ-1 ಮತ್ತು ನಿಪಿ-2 ಎಂದು ಗುರುತಿಸಲಾಯಿತು. ಆಧಾರ ಕಾರ್ಡ, ರೇಷನ ಕಾರ್ಡ ಮತ್ತು ಚುನಾವಣೆ ಚೀಟಿಯನ್ನು ನಿಪಿ-3 ರಿಂದ ನಿಪಿ-5, ನಿಪಿ-7 ಎಂದು ಗುರುತಿಸಲಾಯಿತು. ಶಾಲಾ ದೃಢಿಕೃತ ಪತ್ರವನ್ನು ನಿಪಿ-6 ಎಂದು ಗುರುತಿಸಲಾಯಿತು. ಫೊಟೋಗಳನ್ನು ನಿಪಿ-8 ರಿಂದ ನಿಪಿ-11 ಎಂದು ಗುರುತಿಸಲಾಯಿತು.

<u>ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.</u>

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ